# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ

## ಸಿ.ಸಿ ನಂಃ 967/2019

| | | |
|---|---|---|
| ಸಾಕ್ಷಿಯ ಹೆಸರುಃ | ಭೀಮಾಶಂಕರ | ಪ್ರಾಸಾಃ 01 |
| ತಂದೆ/ಗಂಡನ ಹೆಸರುಃ | ಮಲ್ಲಪ್ಪ | ಚಾಸಾಃ 02 |
| ವಯಸ್ಸುಃ | 24 ವರ್ಷ | ದಿಃ 31.01.2025. |
| ಉದ್ಯೋಗಃ | ಕೂಲಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಾಪೂರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾ 3 ಮತ್ತು ಆರೋಪಿಯ ಪರಿಚಯ ಇರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುವುದಿಲ್ಲ. ಘಟನೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ನಾನು ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋದಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸಹಾಯಕ ಸರಕಾರಿ ಅಭಿಯೋಜಕರು ಭಿನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾಗ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 20.03.2019 ರಂದು ಮಃ01.30 ರಿಂದ 02.30 ಗಂಟೆಯವರೆಗೆ ಪೋಲಿಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪಂಚಾನಮೆಯನ್ನು ತೋರಿಸಿದ್ದು ಅದನ್ನು ನಿಪಿ-1 ಎಂದು ನಿಪಿ-1 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು(ಬಿ) ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರಃ ಶ್ರೀ ಯು.ಬಿ.ಎಂ ವಕೀಲರವರಿಂದಃ</u>**

ಯಾವುದೇ ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ**